156 30

# ಮೈಸೂರ ಗೆಜೆಟ್ಟು.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 8.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 21, ಸ್ಯ 1907.

## II ನೇ ಭಾಗ.

### ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮತ್ತೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ.

ಇಸ್ತಿಹಾರ್ನಾಮೆ.

ದರಜಾಗ್ಹಾ, ಬೆಂಗಳೂರು, ತಾರೀಖು 29ನೆ ಜನವರಿ 1907ನೆ ಇಸವಿ.

ನಂ. 13. ಮುಂಜೆ ಜಾರಿಯಲ್ಲಿದ್ದ ಪದ್ಧತಿಯನ್ನು ರದ್ದುಪಡಿಸಿ ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ್ಯ 1907ನೆ ಇಸವಿ ಏಪ್ರೆಲ್ ತಾರೀಖು 1ರ ಲಾಗಾಯ್ತು 1908ನೆ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಕೊಡಗು ಕೀವ್ಯೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತಗಿಯುವ ದಕ್ಕೊಸ್ತರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ವಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವೇರಿಗೆ ಹರಾಜು ಮಾಡಲ್ಪಡುವದು.

(i) 1907ನೆ ಇಸವಿ ಮಾರ್ಚಿ 8ನೆ ತಾರೀಖಿನಲ್ಲಿ ಮಡಿಕೇರಿಯಲ್ಲಿ ಮಡಿಕೇರಿ ತಾಲ್ಲೂಕು ಸುಬೇದಾರರ ಮುಂದೆ.

(ii) 1907ನೆ ಇಸವಿ ಮಾರ್ಚಿ 6ನೆ ತಾರೀಖಿನಲ್ಲಿ ವೀರರಾಜಪೇಟೆಯಲ್ಲಿ ಯಿಡಿನಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1907ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ಗೋಣಿಕೊಪ್ಪಲ್ಲಲ್ಲಿ ಕಿಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಬೆಳೆಪಟ್ಟಿರುತ್ತದೆ. ಅವೆರು ಯಾವ ಕಾರಣವೂ ನಮೂದಿಸದೆ ಚಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲಾ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಲಗನ್ನು ಕೊಟ್ಟದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಭಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. 80 ತೊಲದ ಕೇರಿಗೆ 20 ರೂಪಾಯಿ ವೇರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಅಫೀಂ ಕೊಡಲ್ಪಡುತ್ತೆ.

5. 80 ತೊಲದ ಕೇರಿಗೆ ಬಂದೇ ಬೆಲೆಯಾಗಿ 45 ರೂಪಾಯಿ ವೇರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವೆಂದರೆ :—

ಮಡಿಕೇರಿಯಲ್ಲಿ ಬಂದು.
ವೀರರಾಜಪೇಟೆಯಲ್ಲಿ ಬಂದು.
ಗೋಣಿಕೊಪ್ಪಲ್ಲಲ್ಲಿ ಬಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಎಫ್. ಪಿ. ರೆನ್ನಿ.
ಚೀಫ್ ಕಮಿಷನರವರ ಸೆಕ್ರಿಟರಿಯವರು.